PW-1

ಇಂದು ದಿ.28-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀಸವಾಲುಃ- </u>ಆರೋಪಿಪರ ಶ್ರೀ ಎಸ್ ಎಸ್ ಎಸ್ ವಕಿಲರಿಂದ.

12) ನಾನು ವಿದ್ಯಾಭ್ಯಾಸ ಮಾಡಿರುವುಲ್ಲ. ನನಗೆ ಯಾವುದೇ ದಾಖಲೆ ಓದಲು, ಬರೆಯಲು ಬರುವುದಿಲ್ಲ. ನಾನು ಅಕ್ಕಿ ವ್ಯಾಪಾರ ಮಾಡುತ್ತೇನೆ. ಚಾಸಾ-2 ನನ್ನ ಮಗಳು ದಾವಣಗೆರೆಯ ಬಾಪೂಜಿ ಕಾಲೇಜಿನಲ್ಲಿ ಬಿ.ಎಸ್.ಸಿ. ವಿದ್ಯಾಭ್ಯಾಸ ಮಾಡಿರುತ್ತಾಳೆ. ನನಗೆ ನಾಲ್ಕು ಜನ ಹೆಣ್ಣುಮಕ್ಕಳು ಇದ್ದು, ಒಬ್ಬ ಗಂಡು ಮಗ. ಅವರಲ್ಲಿ ಹಿರಿಯ ಮಗಳು ಆಶಾ ಇವಳು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿರುತ್ತಾಳೆ. ಅವಳ ಮದುವೆಯಾಗಿ ಬೆಂಗಳೂರಿನಲ್ಲಿ ವಾಸವಾಗಿದ್ದಾಳೆ. ಆಕೆಯ ಮದುವೆ 2004 ರಲ್ಲಿ ಆಗಿರುತ್ತದೆ. 2 ನೇ ಮಗಳು ಅಭಿಲಾಶಾ ಬಿಎಸ್ ಸಿ ಮುಗಿಸಿ ಎಂ ಎಸ್ ಸಿ ಮಾಡಿರುತ್ತಾಳೆ. 3 ನೇ ಮಗಳು ಚಾಸಾ-2 ಪದ್ಮಾ, ಕೊನೆಯವನು ಶ್ರೀನಿವಾಸ್ ಗಂಡು ಮಗನಾಗಿದ್ದು ಆತ ಇಂಜಿನಿಯರಿಂಗ್ ಓದಿರುತ್ತಾನೆ. ಆತನ ಮದುವೆಯಾಗಿರುವುದಿಲ್ಲ. ಶ್ವೇತಾ ನನ್ನ ಕೊನೆಯ ಮಗಳು , ಅವಳ ವಿವಾಹವಾಗಿರುವುದಿಲ್ಲ.

13) ಆರೋಪಿ ಮತ್ತು ಚಾಸಾ-2 ರವರು ಪ್ರೀತಿಸಿ ಪ್ರೇಮ ವಿವಾಹ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ಆರೋಪಿ ಮತ್ತು ಚಾಸಾ-2 ರವರು ಒಂದೇ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಮತ್ತು ಚಾಸಾ-2 ರವರ ಮಧ್ಯ ಪ್ರೀತಿ ಇದ್ದ ಬಗ್ಗೆ ಯಾವಾಗ ತಿಳಿದಿರುತ್ತದೆ ಎಂದರೆ ಸಾಕ್ಷಿ ಅವರ ನಡುವೆ ಪ್ರೀತಿ ಮೊದಲಿನಿಂದ ಇತ್ತು , ಆದರೆ ನಮಗೆ ಅವರು ಮನೆ ಬಿಟ್ಟು ಹೋಗುವ ಐದು ತಿಂಗಳು ಮುಂಚೆ ಬೇರೆಯವರಿಂದ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಹತ್ತು ವರ್ಷದ ಹಿಂದೆ ಪದ್ಮಾಳ ಮದುವೆ ಆರೋಪಿ ಜೊತೆ ಆಗಿತ್ತು ಎಂದು ಹೇಳಿದ್ದು , ಆ ಹೊತ್ತಿಗೆ ಎಷ್ಟು ಮಕ್ಕಳ ಮದುವೆಯಾಗಿತ್ತು ಎಂದರೆ ಸಾಕ್ಷಿ - ಇಬ್ಬರು ಮಕ್ಕಳ ಮದುವೆಯಾಗಿತ್ತು ಎಂದು ನುಡಿಯುತ್ತಾರೆ. ನನ್ನ ಇಬ್ಬರೂ ಹೆಣ್ಣು ಮಕ್ಕಳಿಗೆ ಮದುವೆ ಮಾಡುವ ಕಾಲಕ್ಕೆ ಒಳ್ಳೆಯ ಸಂಬಧ ನೋಡಿ ಅಳಿಯ ಏನು ಮಾಡುತ್ತಾನೆ ಎಂದು ತಿಳಿದುಕೊಂಡು ಒಳ್ಳೆಯ ಕಡೆ

ಮದುವೆ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿ. ಚಾಸಾ–2 ರವರು ಆರೋಪಿ ಜೊತೆ ಮದುವೆಯಾಗುವ ಕಾಲಕ್ಕೆ ನನಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ಆರೋಪಿ ಮತ್ತು ಚಾಸಾ–2 ರವರು ಮದುವೆಯಾಗುವ ಎಷ್ಟು ತಿಂಗಳು ಮುಂಚೆ ಅವರಿಬ್ಬರೂ ಪ್ರೀತಿಸುವ ವಿಚಾರ ತಿಳಿದಿರುತ್ತದೆ ಎಂದರೆ ಸಾಕ್ಷಿ ಐದು ತಿಂಗಳು ಮುಂಚೆ ತಿಳಿದಿತ್ತು ಎಂದು ನುಡಿಯುತ್ತಾರೆ. ಐದು ತಿಂಗಳು ಮುಂಚೆ ಆರೋಪಿ ಮತ್ತು ಚಾಸಾ–2 ಪ್ರೀತಿಸುತ್ತಿದ್ದ ವಿಚಾರ ತಿಳಿದಿದ್ದು ಆರೋಪಿ ಜೊತೆಗೆ ಚಾಸಾ–2 ರವರನ್ನು ಮದುವೆ ಮಾಡಿಕೊಡಲು ನನಗೆ ಒಪ್ಪಿಗೆ ಇರಲಿಲ್ಲ ಎಂದರೆ ಸರಿ. ಚಾಸಾ–2 ರವರು ಆರೋಪಿ ಜೊತೆ ಮದುವೆಯಾಗಿದ್ದರಿಂದ ನನಗೆ ಅಸಮಾಧಾನವಾಗಿ ನಾನು ಚಾಸಾ–2 ರವರ ಜೊತೆ ಮಾತುಕತೆಯನ್ನು ನಿಲ್ಲಿಸಿರುತ್ತೇನೆ ಎಂದರೆ ಸರಿ . ಚಾಸಾ–2 ರವರು ಆರೋಪಿ ಜೊತೆ ಮದುವೆಯಾದ ನಂತರ ಚಾಸಾ–2 ರವರು ನಿಮ್ಮ ಮನೆಗೆ ಬರುತ್ತಿರಲಿಲ್ಲ ಮತ್ತು ನಾವು ಅವರ ಮನೆಗೆ ಹೋಗುತ್ತಿರಲಿಲ್ಲ ಎಂದರೆ ಸರಿ . ಚಾಸಾ–2 ರವರ ಮದುವೆ ಆರೋಪಿಯ ಜೊತೆ ಆದ ನಂತರ ಯಾರ ಜೊತೆ, ಎಲ್ಲಿ ವಾಸವಾಗಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದರೆ ಸರಿ . ಚಾಸಾ–2 ರವರು ಅವರ ಗಂಡನ ಮನೆಯಲ್ಲಿದ್ದಾಗ ಅವರಿಬ್ಬರ ನಡುವೆ ಸಂಬಂಧ ಹೇಗಿತ್ತು ಮತ್ತು ಅವರ ಮನೆಯ ಪರಿಸ್ಥಿತಿ ಹೇಗಿತ್ತು ಎಂದು ನನಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ಆರೋಪಿ ಮತ್ತು ಚಾಸಾ–2 ರವರ ದಾಂಪತ್ಯ ಜೀವನದಿಂದ ಒಂದು ಗಂಡು ಮಗು ಇರುತ್ತದೆ ಎಂದರೆ ಸರಿ . ಆತನ ಹೆಸರು ಮೋಹಿತ್ ಈಗ ಆತ ನಾಲ್ಕರಿಂದ ಐದು ವರ್ಷ ಇರಬಹುದು. ಮೋಹಿತ್ ಈಗ ಆರೋಪಿಯ ತಂದೆ ತಾಯಿ ಜೊತೆ ವಾಸವಾಗಿದ್ದಾನೆ ಎಂದರೆ ಸರಿ .

14) ಚಾಸಾ–2 ರವರ ಮದುವೆಯಾದ ಏಳು ವರ್ಷಗಳ ಬಳಿಕ ಮತ್ತೆ ಸಂಪರ್ಕಕ್ಕೆ ಬಂದು ಮಾತನಾಡಿರುತ್ತೇನೆ. ಚಾಸಾ–2 ರವರು 2024 ರಲ್ಲಿ ಬೆಂಗಳೂರಿಗೆ ಕೆಲಸ ಮಾಡಲು ಹೋಗಿದ್ದರು. ಚಾಸಾ–2 ರವರು ಬೆಂಗಳೂರಿನಲ್ಲಿ ಮೆಡಿಕಲ್ ರೆಪ್ರಸೆಂಟಿಟಿವ್ ಆಗಿ ಕೆಲಸ ಮಾಡುತ್ತಿದ್ದಳು. ಚಾಸಾ–2 ಬೆಂಗಳೂರಿನಲ್ಲಿ ಪಿ ಜಿ ಯಲ್ಲಿ ವಾಸವಾಗಿದ್ದಳು. ಬೆಂಗಳೂರಿನಲ್ಲಿದ್ದಾಗ ಚಾಸಾ–2 ರವರು ಮೋಹಿತ್ನನ್ನು ಕರೆದುಕೊಂಡು ಹೋಗಿರಲಿಲ್ಲ ಎಂದರೆ ಸರಿ . ಚಾಸಾ–2 ರವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ಮೋಹಿತ್ ಮತ್ತು ಆರೋಪಿ , ಆರೋಪಿಯ ತಂದೆ ತಾಯಿ ಜೊತೆಯಲ್ಲಿ ದಾವಣಗೆರೆಯಲ್ಲಿ

ವಾಸವಾಗಿದ್ದರು ಎಂದರೆ ಸರಿ .

15) ಆರೋಪಿ ಚಾಸಾ–2 ರವರ ಮೇಲೆ ಅನುಮಾನ ಪಡುತ್ತಿದ್ದಾನೆ ಎಂದು ಮೊಟ್ಟ ಮೊದಲ ಬಾರಿ ಯಾವಾಗ ತಿಳಿದಿರುತ್ತದೆ ಎಂದರೆ ಸಾಕ್ಷಿ – 2024 ರಲ್ಲಿ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿ ಚಾಸಾ–2 ರವರ ಮೇಲೆ ಸಂಶಯ ಪಡುತ್ತಿದ್ದಾನೆ ಎಂದು ಹೇಳಿ , ಆರೋಪಿಯ ಮನೆಗೆ ಹೋಗಿ ಸದರಿ ವಿಚಾರವನ್ನು ಪ್ರಸ್ತಾಪ ಮಾಡಿರುತ್ತೀರಾ ಎಂದರೆ ಸಾಕ್ಷಿ – ಇಲ್ಲ ಎಂದು ನುಡಿಯುತ್ತಾರೆ. ನಾನಾಗಲಿ ಅಥವಾ ನಮ್ಮ ಮನೆಯ ಸದಸ್ಯರಾಗಲಿ ಯಾರೂ ಕೂಡಾ ಆರೋಪಿಯ ಮನೆಗೆ ಹೋಗಿ ಸದರಿ ವಿಚಾರದ ಬಗ್ಗೆ ಆರೋಪಿ ಜೊತೆ ಪ್ರಸ್ತಾಪ ಮಾಡಿರುವುದಿಲ್ಲ ಎಂದರೆ ಸರಿ. ಚಾಸಾ–2 ರವರು ಹೇಳಿದ ವಿಚಾರಗಳ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ನಾನು ಖುದ್ದಾಗಿ ಹೋಗಿ ಪ್ರಯತ್ನಿಸಿರುವುದಿಲ್ಲ ಎಂದರೆ ಸರಿ. ಸದರಿ ವಿಚಾರದಲ್ಲಿ ಮೊದಲ ಬಾರಿ ನನ್ನ ಮಗಳು ನನಗೆ ತಿಳಿಸಿದಾಗ ನೀನು – ಪ್ರೀತಿಸಿ ಮದುವೆಯಾಗಿದ್ದು, ನೀನೇ ನೋಡಿಕೋ ಎಂದು ಹೇಳಿರುತ್ತೇನೆ ಎಂದರೆ ಸರಿ .

16) ನನ್ನ ಮಗಳಿಗೆ ಆರೋಪಿ ಕಿರುಕುಳ ಕೊಡುತ್ತಿದ್ದಾನೆ ಎಂಬ ವಿಚಾರ ಯಾವಾಗ ಮೊದಲ ಬಾರಿಗೆ ಚಾಸಾ–2 ರವರು ತಿಳಿಸಿರುತ್ತಾರೆ ಎಂದರೆ ಸಾಕ್ಷಿ – 2024 ರಲ್ಲಿ ತಿಳಿಸಿರುತ್ತಾಳೆ, ತಿಂಗಳು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲೂ ಕೂಡಾ ನಾನು – ನೀನು ಪ್ರೀತಿಸಿ ಮದುವೆಯಾಗಿದ್ದು, ನಮ್ಮ ಮನೆಗೆ ಬರಬೇಡ ಎಂದು ನೀನು ನಿನ್ನ ಗಂಡನ ಮನೆಯಲ್ಲಿರು ಎಂದು ಹೇಳಿ ವಾಪಸ್ ಕಳುಹಿಸಿರುತ್ತೇವೆ ಎಂದರೆ ಸರಿ . ನನ್ನ ಮಗಳು ಆರೋಪಿ ಕಿರುಕುಳ ಕೊಡುತ್ತಿದ್ದಾನೆ ಎಂದು ಹೇಳಿದಾಗಲೂ ಸಹ ನಾನು ಖುದ್ದಾಗಿ ಆರೋಪಿಯ ಮನೆಗೆ ಹೋಗಿ ವಿಚಾರಿಸಿರುವುದಿಲ್ಲ ಎಂದರೆ ಸರಿ . ನನ್ನ ಮಗಳು ಹೇಳಿದ ವಿಚಾರಗಳ ಸತ್ಯಾಸತ್ಯತೆಗಳನ್ನು ತಿಳಿದುಕೊಳ್ಳಲು ನಾನ ಸ್ವಯಂ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿ .

17) ನನ್ನ ಮಗಳು ಬೆಂಗಳೂರಿನಲ್ಲಿ ಕೆಲಸ ಮಾಡಲು ಮತ್ತು ಪಿ ಜಿ ಯಲ್ಲಿ ವಾಸವಿರುವ ಬಗ್ಗೆ ಆರೋಪಿಗೆ ತಿಳಿಸಿ ಹೋಗಿದ್ದಳು ಎಂದರೆ ಸಾಕ್ಷಿ ಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಕ್ಟೋಬರ್–2024 ರಲ್ಲಿ ಆರೋಪಿ ನನ್ನ ಮಗಳನ್ನು

ಮಾತನಾಡಿಸಲು ಬೆಂಗಳೂರಿಗೆ ಹೋಗಿದ್ದ ಎಂದರೆ ಸಾಕ್ಷಿ- ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ತನ್ನ ಮಗನ ಜೊತೆ ಬೆಂಗಳೂರಿಗೆ ಹೋಗಿ ಚಾಸಾ-2 ರವರ ಜೊತೆ ಮಾತನಾಡಲು ಪ್ರಯತ್ನಿಸಿರುವ ಬಗ್ಗೆ ನಿಮಗೆ ತಿಳಿದಿರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

18) ಆರೋಪಿ ತನ್ನ ಮಗನ ಜೊತೆ ಬೆಂಗಳೂರಿಗೆ ಹೋಗಿ ಪದ್ಮಾಳಿಗೆ ನಮ್ಮ ಸಂಸಾರವನ್ನು ದಾವಣಗೆರೆಯಲ್ಲಿ ಮಾಡೋಣ ಎಂಬ ವಿಚಾರ ತಿಳಿಸಲು ಹೋಗಿದ್ದನು ಎಂದರೆ ಸಾಕ್ಷಿ - ನನಗೆ ಅದೆಲ್ಲ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಬೆಂಗಳೂರಿಗೆ ಹೋಗಿ ದಾವಣಗೆರೆಯಲ್ಲಿ ಸಂಸಾರ ಮಾಡೋಣ ಎಂದು ಹೇಳಿದ ವಿಚಾರವನ್ನು ನನ್ನ ಮಗಳು ನನಗೆ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ನನಗೆ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗಳು ಬೆಂಗಳೂರಿನಲ್ಲಿ ಐದಾರು ತಿಂಗಳು ಕೆಲಸ ಮಾಡಿರುತ್ತಾಳೆ. ನನ್ನ ಮಗಳು ಬೆಂಗಳೂರಿನಿಂದ ದಾವಣಗೆರೆಗೆ ಯಾವಾಗ ವಾಪಸ್ ಬಂದಿರುತ್ತಾಳೆ ಎಂದರೆ ಸಾಕ್ಷಿ -2025 ರಲ್ಲಿ ಬಂದಿದ್ದು ತಿಂಗಳು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

19) ಚಾಸಾ-2 ಬೆಂಗಳೂರಿನಿಂದ ದಾವಣಗೆರೆಗೆ ಬಂದಾಗ ಯಾರ ಜೊತೆ ವಾಸವಿದ್ದಳು ಎಂದರೆ ಸಾಕ್ಷಿಯು - ಚಾಸಾ-2 ದಾವಣಗೆರೆಯಲ್ಲಿ ವಾಸವಿರಲಿಲ್ಲ. ಅವಳು ಡೈವರ್ಸ್ ಕೇಸು ಹಾಕಲು ಬಂದು ಕೇಸು ಮುಗಿಸಿಕೊಂಡು ವಾಪಸ್ ಬಂಗಳೂರಿಗೆ ಹೋಗುತ್ತಿದ್ದಳು ಎಂದು ನುಡಿಯುತ್ತಾರೆ. ಚಾಸಾ-2 ಬೆಂಗಳೂರಿನಲ್ಲಿ ಐದಾರು ತಿಂಗಳು ಕೆಲಸ ಮಾಡಿಕೊಂಡಿದ್ದಳು ಎಂದು ಹೇಳಿದ್ದು , ನಂತರ ಯಾವ ಊರಿಗೆ ಬಂದು ವಾಸವಿರುತ್ತಾರೆ ಎಂದರೆ ಸಾಕ್ಷಿ - ನಂತರ ಆಕೆ ಬೆಂಗಳೂರಿನಲ್ಲಿ ವಾಸವಾಗಿರುವುದನ್ನು ಮುಂದುವರೆಸಿದ್ದಳು ಎಂದು ನುಡಿಯುತ್ತಾರೆ. ಚಾಸಾ-2 ರವರು ಬೆಂಗಳೂರಿನಿಂದ ದಾವಣಗೆರೆಗೆ ಬಂದು ವಿವಾಹ ವಿಚ್ಛೇದನೆಗೆ ಕೇಸು ದಾಖಲಿಸುವಾಗ ನಿಮಗೆ ತಿಳಿಸಿರುತ್ತಾರೆಯೇ ಎಂದರೆ ಸಾಕ್ಷಿ- ನನಗೆ ತಿಳಿಸಿದ್ದಳು ಎಂದು ನುಡಿಯುತ್ತಾರೆ. ಚಾಸಾ-2 ರವರು ಆರೋಪಿ ವಿರುದ್ಧ ವಿವಾಹ ವಿಚ್ಛೇದನೆಗೆ ಸಲ್ಲಿಸಿದ ಅರ್ಜಿಯಲ್ಲಿ ಯಾವ ಕಾರಣಗಳನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ- ಆರೋಪಿ ಚಾಸಾ-2 ರವರಿಗೆ ಕಿರುಕುಳ

ನೀಡುತ್ತಿದ್ದು, ಆತ ದುಡಿಯುತ್ತಿರಲಿಲ್ಲ , ತಾನೇ ಎಲ್ಲವನ್ನು ನಿಭಾಯಿಸಬೇಕಾಗಿದ್ದು, ಮತ್ತು ಆರೋಪಿ ಆಕೆಯ ಮೇಲೆ ಸಂಶಯ ಮಾಡುತ್ತಿದ್ದಾನೆ ಎಂಬ ಕಾರಣವನ್ನು ತಿಳಿಸಿರುತ್ತಾಳೆ.

20) ನಿಮ್ಮ ಮಗಳು ವಿವಾಹ ವಿಚ್ಚೇದನೆಗೆ ಅರ್ಜಿ ಸಲ್ಲಿಸಿದ್ದಳು ಎಂದು ಹೇಳಿದ್ದು , ಆಕೆಗೆ ಮಗು ಇದ್ದು ಪ್ರೀತಿ ಮದುವೆಯಾಗಿರುತ್ತೀಯಾ , ವಿವಾಹ ವಿಚ್ಛೇದನೆಗೆ ಹೋಗುವ ಮುಂಚೆ ಹೊಂದಿಕೊಂಡು ಹೋಗು ಎಂದು ಬುದ್ದಿವಾದ ಹೇಳಿರುತ್ತೀರಾ ಎಂದರೆ ಸಾಕ್ಷಿ ನನ್ನ ಮಗಳಿಗೆ ಫೋನಿನಲ್ಲಿ ಅನೇಕ ಬಾರಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಗಳು ಆರೋಪಿ ಜೊತೆ ಮದುವೆಯಾಗುವುದು ನನಗೆ ಇಷ್ಟವಿಲ್ಲದ ಕಾರಣ ನನ್ನ ಮಗಳು ವಿವಾಹ ವಿಚ್ಛೇದನೆಗೆ ಸಲ್ಲಿಸಿರುವ ಅರ್ಜಿ ಸರಿ ಎಂದು ನನಗೆ ಅನ್ನಿಸಿತ್ತು ಎಂದರೆ ಸರಿ.

21) ದಾವಣಗೆರೆಯ ಕೌಟುಂಬಿಕ ನ್ಯಾಯಾಲಯದಲ್ಲಿ ನನ್ನ ಮಗಳು ಸಲ್ಲಿಸಿದ ವಿವಾಹ ವಿಚ್ಛೇದ ನ ಪ್ರಕರಣ ದಿ.20-09-2025 ರಂದು ಯಾವ ಹಂತದಲ್ಲಿತ್ತು ಎಂದರೆ ಸಾಕ್ಷಿ - ಕೊನೆಯ ಹಂತರದಲ್ಲಿತ್ತು ಎಂದು ನುಡಿಯುತ್ತಾರೆ. ನೀವು ಮತ್ತು ನಿಮ್ಮ ಮಗಳು ಕೌಟುಂಬಿಕ ನ್ಯಾಯಾಲಯಕ್ಕೆ ಬೆಳಿಗ್ಗೆ 10-15 ರಿಂದ 10-30 ಕ್ಕೆ ಬಂದಿರುತ್ತೇವೆ ಎಂದು ಹೇಳಿದ್ದು, ಆಗ ಕೌಟುಂಬಿಕ ನ್ಯಾಯಾಲಯದ ಮುಂದೆ ಎಷ್ಟು ಜನ ಪಕ್ಷಗಾರರು ಮತ್ತು ಜನರು ಇದ್ದರು ಎಂದರೆ ಸಾಕ್ಷಿ- ಸುಮಾರು 70 ರಿಂದ 100 ಜನ ಇದ್ದರು ಎಂದು ನುಡಿಯುತ್ತಾರೆ. ನಾವು ಕೌಟುಂಬಿಕ ನ್ಯಾಯಾಲಯದ ಕಟ್ಟೆಯ ಮೇಲೆ ಕುಳಿತುಕೊಂಡಿದ್ದೇವು ಎಂದು ಹೇಳಿದ್ದು , ಆ ಸಮಯದಲ್ಲಿ ಕೊರ್ಟ್ ಆವರಣದಲ್ಲಿ ಪೊಲೀಸ್ ಪೇದೆ ಇದ್ದು ಎಲ್ಲಾ ಕೊರ್ಟ್ ಗಳಿಗೆ ಓಡಾಡುತ್ತಿದ್ದರು ಎಂದರೆ ಸರಿ. ಆರೋಪಿ ನಾವು ಕುಳಿತ ಕಡೆ ಬಂದು ದುರುಗುಟ್ಟಿ ನಮ್ಮನ್ನು ನೋಡುತ್ತಿದ್ದ ಎಂದು ಹೇಳಿದ್ದು, ಆಗ ಪೊಲೀಸರಿಗೆ ಸದರಿ ವಿಚಾರವನ್ನು ತಿಳಿಸಲು ಪ್ರಯತ್ನಿಸಿರುತ್ತೀಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

22) ಆ ದಿನ ಬೆಳಿಗ್ಗೆ 10-15 ರಿಂದ 10-30 ಕ್ಕೆ ಕೌಟುಂಬಿಕ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದು ಹೇಳಿದ್ದು , ನ್ಯಾಯಾಲಯದಲ್ಲಿ ನಿಮ್ಮ ಕೇಸನ್ನು ಎಷ್ಟು ಗಂಟೆಗೆ ಕರೆಯಲಾಗಿತ್ತು ಎಂದರೆ ಸಾಕ್ಷಿ ಸುಮಾರು 1-00 ಗಂಟೆಗೆ ನಾವು ಹೊರಗಡೆ

ಹೋಗುತ್ತೇವೆ ಎಂದು ನುಡಿಯುತ್ತಾರೆ. ಬೆಳಿಗ್ಗೆ 10–15 ರಿಂದ ಮಧ್ಯಾಹ್ನ 1–00 ಗಂಟೆ ವರೆಗೆ ನೀವು ಕೌಟುಂಬಿಕ ನ್ಯಾಯಾಲಯದ ಮುಂದೆ ಇದ್ದ ಕಟ್ಟೆಯ ಮೇಲೆ ಕುಳಿತುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

23) ನಿಮ್ಮ ಮಗಳು ಡಿಎಲ್ ಎಸ್ ಎ ಕಛೇರಿಗೆ ಎಷ್ಟು ಗಂಟೆಗೆ ಹೋಗಿರುತ್ತಾಳೆ ಎಂದರೆ ಸಾಕ್ಷಿಯು – 1.00 ಗಂಟೆ ಸುಮರಿಗೆ ಹೋಗಿರುತ್ತಾಳೆ ಎಂದು ನುಡಿಯುತ್ತಾರೆ. ಡಿಎಲ್ ಎಸ್ ಎ ಕಛೇರಿಯಲ್ಲಿ ನಿಮ್ಮ ಮಗಳ ಕೇಸು ಯಾರ ಬಳಿ ಇತ್ತು ಎಂದರೆ ಸಾಕ್ಷಿಯು – ನನ್ನ ಮಗಳಿಗೆ ಸದರಿ ವಿಚಾರ ತಿಳಿದಿರುತ್ತದೆ , ನಾನು ಒಳಗಡೆ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಡಿ ಎಲ್ ಎಸ್ ಎ ಕಛೇರಿ ಒಳಗಡೆ ಎರಡು ಮೂರು ಬಾರಿ ಹೋಗಿ ಬಂದನು ಎಂದು ಹೇಳಿದ್ದು , ಆಗ ಪೊಲೀಸರಿಗೆ ಸದರಿ ವಿಚಾರವನ್ನು ತಿಳಿಸಿರುತ್ತೀರಾ ಎಂದರೆ ಸಾಕ್ಷಿ – ಇಲ್ಲ ಎಂದು ನುಡಿದು , ಮುಂದುವರೆದು ಆತ ಮಾಮೂಲಿನಂತೆ ಒಳಗಡೆ ಹೋರಗಡೆ ಓಡಾಡುತ್ತಿರಬಹುದು ಎಂದು ತಿಳಿದುಕೊಂಡಿದ್ದೆ ಎಂದು ನುಡಿಯುತ್ತಾರೆ. ನನ್ನ ಮಗಳು ಡಿಎಲ್ ಎಸ್ ಎ ಕಛೇರಿ ಒಳಗಡೆ ಹೋದಾಗ ನಾನು ಕೋರ್ಟ್ ಆವರಣದ ಒಳಗಡೆ ಇರುವ ಅರಳಿ ಮರದ ಹತ್ತಿರ ಕುಳಿತುಕೊಂಡಿದ್ದೆ. ಎಲ್ಲ ಜನರು ಕೂಗಾಡಿದ ನಂತರ ನೀವು ಅರಳಿ ಮರದಿಂದ ಡಿಎಲ್ ಎಸ್ ಎ ಕಛೇರಿಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ – ಎಲ್ಲಾ ಜನ ಕೂಗಾಡಿ ಡಿಎಲ್ ಎಸ್ ಎ ಕಛೇರಿ ಕಡೆ ಹೋಗುತ್ತಿದು , ಯಾಕೆ ಹೋಗುತ್ತಿದ್ದಾರೆ ಎಂದು ನಾನು ಡಿಎಲ್ ಎಸ್ ಎ ಕಛೇರಿಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಡಿ ಎಲ್ ಎಸ್ ಎ ಕಛೇರಿಯಲ್ಲಿ ಎಷ್ಟು ಜನ ಪಕ್ಷಗಾರರು ಕಾಯುತ್ತಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಡಿಎಲ್ ಎಸ್ ಎ ಕಛೇರಿಯಲ್ಲಿ ಆ ಸಮಯದಲ್ಲಿ ಎಷ್ಟು ಜನ ಸಿಬ್ಬಂದಿಗಳು ಇದ್ದರು ಎಂದರೆ ಸಾಕ್ಷಿ – ಹತ್ತರಿಂದ ಹದಿನೈದು ಜನ ಇದ್ದರು ಎಂದು ನುಡಿಯುತ್ತಾರೆ. ಆರೋಪಿಗೆ ಅಲ್ಲಿದ್ದ ಜನರು ಹೊಡೆದರು ಎಂದು ಹೇಳಿದ್ದು , ಎಷ್ಟು ಜನ ಹೊಡೆದಿರುತ್ತಾರೆ ಎಂದರೆ ಸಾಕ್ಷಿಯು ಒಬ್ಬ ಪೊಲೀಸ್ ಆತನನ್ನು ಹೊರಗಡೆ ಎಳೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಆರೋಪಿ ಯಾವ ಬಣ್ಣದ ಶರ್ಟ್ ಮತ್ತು ಪ್ಯಾಂಟ್ ಧರಿಸಿದ್ದನು ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ದಿನ ಆರೋಪಿಯನ್ನು ನೋಡಿದ್ದು , ಆತನಿಗೆ ಎಲ್ಲಿ ಎಲ್ಲಿ ಗಯವಾಗಿತ್ತು ಎಂದರೆ ಸಾಕ್ಷಿ ಆತನಿಗೆ ಕೈ ಗೆ

ಗಾಯವಾಗಿತ್ತು ಎಂದು ನುಡಿಯುತ್ತಾರೆ.

24) ಮು.ಮಾ.7 ನ್ನು ನೀವು ನೋಡಿದಾಗ ಎಲ್ಲಿ ಇತ್ತು ಎಂದರೆ ಸಾಕ್ಷಿಯ ಅದು ಆರೋಪಿಯ ಕೈಯಲ್ಲಿತ್ತು ಎಂದು ನುಡಿಯುತ್ತಾರೆ. ಸದರಿ ವಿಷ್ಮುವನ್ನು ನೀವು ನೀಡಿದ ಫಿರ್ಯಾದಿಯಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಯಾವತ್ತು ಹೇಳಿರುವುದಿಲ್ಲ , ಈ ದಿನ ನ್ಯಾಯಾಲಯದಲ್ಲಿ ಮಾದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

25) ನೀವು ಸಿಜಿ ಆಸ್ಪತ್ರೆಗೆ ಅಂಬುಲನ್ಸನಲ್ಲಿ ಹೋಗಿರುತ್ತೇವೆ ಎಂದು ಹೇಳಿದ್ದು , ಸಿಜಿ ಆಸ್ಪತ್ರೆಗೆ ಹೊರಟಾಗ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ ಮಧ್ಯಾಹ್ನ 2−00 ಗಂಟೆಯಾಗಿತ್ತು ಎಂದು ನುಡಿಯುತ್ತಾರೆ. ಸಿಜಿ ಆಸ್ಪತ್ರೆ ತಲುಪಿದಾಗ 2−15 ನಿಮಿಷ ಆಗಿತ್ತು. ಅಂಬುಲನ್ಸನಲ್ಲಿ ಚಾಸಾ−2 ರವರ ಜೊತೆ ಯಾರು ಯಾರು ಹೋಗಿರುತ್ತಾರೆ ಎಂದರೆ ಸಾಕ್ಷಿ − ಆಸ್ಪತ್ರೆಯಿಂದ ಇಬ್ಬರು ಬಂದಿದ್ದು , ಜೊತೆಗೆ ನಾನು ಹೋಗಿರುತ್ತೇನೆ. ಸಿಜಿ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವಿಭಾಗಕ್ಕೆ ಚಾಸಾ−2 ರವನ್ನು ಕರೆದುಕೊಂಡು ಹೋಗಿದ್ದರು. ಸಿಜಿ ಆಸ್ಪತ್ರೆಯಲ್ಲಿ ವೈದರಿಗೆ ಘಟನೆಯ ಬಗ್ಗೆ ಮಾಹಿತಿ ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿ ನಾನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳಿದ ಮಾಹಿತಿಯನ್ನು ತುರ್ತು ಚಿಕಿತ್ಸಾ ವಿಭಾಗದಲ್ಲಿದ್ದ ವೈದ್ಯರು ರಿಜಿಸ್ಟರ್‌ನಲ್ಲಿ ಬರೆದುಕೊಂಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಿಜಿ ಆಸ್ಪತ್ರೆಯ ಆವರಣದಲ್ಲಿ ಒಂದು ಪೊಲೀಸ್ ಔಟ್ ಪೋಸ್ಟ ಇರುತ್ತದೆ ಎಂದರೆ ಸರಿ . ಪೊಲೀಸ್ ಔಟ್ ಪೋಸ್ಟ ಸಿಜಿ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದ ಪಕ್ಕದಲ್ಲಿದ್ದ ಕಾರಣ ಅಲ್ಲಿ ಯಾವಾಗಲೂ ಪೂಲೀಸರು ಇರುತ್ತಾರೆ ಎಂದರೆ ಸರಿ .

26) ದಿ.20−09−2025 ರ ಮಧ್ಯಾಹ್ನ 2−15 ಗಂಟೆಗೆ ನೀವು ಸಿಜಿ ಆಸ್ಪತ್ರೆಗೆ ಹೋದಾಗ ಪೊಲೀಸ್ ಔಟ್ ಪೋಸ್ಟ ನಲ್ಲಿದ್ದ ಪೊಲೀಸರಿಗೆ ದೂರು ಸಲ್ಲಿಸಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಚಿಕಿತ್ಸೆಯಾಗುವುದಿಲ್ಲ ದೊಡ್ಡ ಆಸ್ಪತ್ರೆಗೆ ಹೋಗಿ ಎಂದು ತಿಳಿಸಿದರು ಎಂದು ಹೇಳಿದ್ದು , ಸಿಜಿ ಆಸ್ಪತ್ರೆಯಿಂದ ದೊಡ್ಡ ಆಸ್ಪತ್ರೆಗೆ ಹೇಗೆ ಹೋಗಿರುತೀರಿ ಎಂದರೆ ಸಾಕ್ಷಿ ಅವರೇ

ಅಂಬುಲನ್ಸನಲ್ಲಿ ಕಳುಹಿಸಿದ್ದರು ಎಂದು ನುಡಿಯುತ್ತಾರೆ. ಸಿಜಿ ಆಸ್ಪತ್ರೆಯಿಂದ ಹೈಟೆಕ್ ಆಸ್ಪತ್ರೆ ಎಷ್ಟು ಕಿಮೀ ದೂರದಲ್ಲಿದೆ ಎಂದರೆ ಸಾಕ್ಷಿ – ಮೂರು ನಾಲ್ಕು ಕಿಮೀ ಅಂತರದಲ್ಲಿದೆ ಎಂದು ನುಡಿಯುತ್ತಾರೆ. ಸಿಜಿ ಆಸ್ಪತ್ರೆಯಿಂದ ಹೈ ಟೆಕ್ ಆಸ್ಪತ್ರೆಗೆ ಎಷ್ಟು ಗಂಟೆಗೆ ಹೊರಟಿರುತ್ತೀರಿ ಎಂದರೆ ಸಾಕ್ಷಿ 3.30 ಗಂಟೆಯಾಗಿತ್ತು ಎಂದು ನುಡಿಯುತ್ತಾರೆ. ಹೈಟೆಕ್ ಆಸ್ಪತ್ರೆಗೆ ಮುಟ್ಟಿದಾಗ 4.00 ಗಂಟೆಯಾಗಿತ್ತು. ಹೈಟೆಕ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳಿಗೆ ಮಾಹಿತಿ ಯಾರುನೀಡಿರುತ್ತಾರೆ ಎಂದರೆ ಸಾಕ್ಷಿ ನಾನೇ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

27) ನಿಪಿ.1 ದೂರನ್ನು ನೀಡಿರುತ್ತೇನೆ ಎಂದು ಹೇಳಿದ್ದು , ಅದಕ್ಕು ಮುಂಚೆ ಆಸ್ಪತ್ರೆಗೆ ಪೊಲೀಸರು ಬಂದಿರುತ್ತಾರೆಯೇ ಎಂದರೆ ಸಾಕ್ಷಿ ಪೊಲೀಸರು ಅಲ್ಲಿಯೇ ಇದ್ದರು ಎಂದು ನುಡಿಯುತ್ತಾರೆ. ಸಿಜಿ ಆಸ್ಪತ್ರೆ ಮತ್ತು ಹೈಟೆಕ್ ಆಸ್ಪತ್ರೆ ಎರಡೂ ಕಡೆ ಪೊಲೀಸರು ಇದ್ದರು ಎಂದರೆ ಸಾಕ್ಷಿಯು ಸಿಜಿ ಆಸ್ಪತ್ರೆಯಲ್ಲಿ ಪೊಲೀಸರು ಇದ್ದು , ಅವರೇ ಹೈ ಟೆಕ್ ಆಸ್ಪತ್ರೆಗೆ ಬಂದಿದ್ದರು ಎಂದು ನುಡಿಯುತ್ತಾರೆ. ಪೊಲೀಸರು ಹೈಟೆಕ್ ಆಸ್ಪತ್ರೆಗೆ ಬಂದಿದ್ದರು ಎಂದು ಹೇಳಿದ್ದು, ಆಗ ಪೊಲೀಸರು ನಿಮ್ಮ ಮಗಳ ಹೇಳಿಕೆಯನ್ನು ಪಡೆಯಲು ಪ್ರಯತ್ನಿಸಿರುತ್ತಾರೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮಗಳು ಎಷ್ಟು ಬಾರಿ ಹೇಳಿಕೆ ನೀಡಿರುತ್ತಾಳೆ ಎಂದರೆ ಸಾಕ್ಷಿಯು ಪೊಲೀಸರು ಕೇಳಿದಾಗ ಆಕೆ ಹೇಳಲು ಪ್ರಯತ್ನಿಸುತ್ತಿದು , ಆಕೆಗೆ ಧ್ವನಿ ಸರಿಯಾಗಿ ಬರುತ್ತಿರಲಿಲ್ಲ, ಹಾಗಾಗಿ ಪೊಲೀಸರು ಕೇಳುತ್ತಿದ್ದರು ಮತ್ತು ಹೋಗುತ್ತಿದ್ದರು , ನಂತರ ಒಂದು ವರದ ಬಳಿಕ ಆಕೆ ಹೇಳಿಕೆ ನೀಡಿರುತ್ತಾಳೆ ಎಂದು ನುಡಿಯುತ್ತಾರೆ.

28) ನಿಪಿ.1 ದೂರನ್ನು ನಾನು ಬರೆದ ದೂರು ಆಗಿರುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ನಾನು ಹೇಳಿದಂತೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.1 ದೂರನ್ನು ಯಾರು ಬರೆದು ಎಲ್ಲಿ ಬರೆದರು ಎಂದರೆ ಸಾಕ್ಷಿಯು ಪೊಲೀಸ್ ಠಾಣೆಯಲ್ಲಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯಲ್ಲಿ ದೂರನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿ ಯಾರೋ ಬಂದಿದ್ದರು, ಅವರು ನಾನು ಹೇಳಿದಂತೆ ದೂರನ್ನು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಯಾರೋ ಬಂದಿದ್ದರು ಅವರು ದೂರನ್ನು ಬರೆದಿರುತ್ತಾರೆ ಎಂದು ಹೇಳಿದ್ದು , ಅವರ ಸಹಿಯನ್ನು

ನಿಪಿ.1ರ ದೂರಿಗೆ ಅವರ ಸಹಿ ಇರುತ್ತದೆಯೇ ಎಂದರೆ ಸಾಕ್ಷಿ – ಇರುವುದಿಲ್ಲ ಎಂದು ನುಡಿಯುತ್ತಾರೆ. ಕೆ ಟಿಜಿ ನಗರ ಪೊಲೀಸ್ ಠಾಣೆಗೆ ದೂರು ನೀಡಲು ನಿಮ್ಮ ಜೊತೆ ಯಾರು ಬಂದಿದ್ದರು ಎಂದರೆ ಸಾಕ್ಷಿ ನಾನು ಒಬ್ಬನೇ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋಗುವ ಮುಂಚೆ ಪೊಲೀಸರಿಗೆ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿ .

29) ದಿ.21-09-2025ಕ್ಕೆ ಪೊಲೀಸರು ಡಿ ಎಲ್ ಎಸ್ ಎ ಕಛೇರಿಯಲ್ಲಿ ಮಹಜರ್ ಮಾಡಿದ್ದಾರೆ ಎಂದು ಹೇಳಿದ್ದು , ಸಾಕ್ಷಿದಾರರಾದ ಚಾಸಾ-3 ಮತ್ತು 4 ರವರಿಗೆ ಕೇಸಿನ ಬಗ್ಗೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿ –ಅವರು ಕೋರ್ಟಿನ ಬಳಿಯೇ ಇದ್ದರು ಎಂದು ನುಡಿಯುತ್ತಾರೆ. ಚಾಸಾ-3 ಮತ್ತು 4 ರವರಿಗೆ ಮಹಜರ್ ಸಾಕ್ಷಿಯಾಗಿ ಬರಲು ಯಾರು ಕರೆದಿರುತ್ತಾರೆ ಎಂದರೆ ಸಾಕ್ಷಿ – ನಾವೇ ಕರೆದಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ.3 ರಿಂದ 8 ಫೋಟೋಗಳನ್ನು ಯಾರು ತೆಗೆದರು, ಎದರಿಂದ ಎಂದರೆ ಸಾಕ್ಷಿ – ಸ್ಯಾಪಲ್ ತೆಗೆದುಕೊಳ್ಳಲು ಬಂದವರು ಮೊಬೈಲ್ ನಲ್ಲಿ ಫೋಟೋ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮೊಬೈಲ್ ಯಾರಿಗೆ ಸೇರಿದ್ದು, ಯಾವ ಕಂಪನಿಯದು ಎಂದು ನನಗೆ ಮಾಹಿತಿ ಇಲ್ಲ. ಅಲ್ಲಿ ಎಷ್ಟು ಫೋಟೋಗಳನ್ನು ತೆಗೆಯಲಾಗಿತ್ತು ಎಂದರೆ ಸಾಕ್ಷಿ ಹತ್ತರಿಂದ ಹದಿನೈದು ಫೋಟೋ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಮು.ಮಾ.1 ರಿಂದ 6 ವಸ್ತುಗಳ ಮೇಲೆ ಎಲ್ಲಿ ಎಲ್ಲಿ ಮತ್ತು ಎಷ್ಟು ಪ್ರಮಾಣದ ರಕ್ತದ ಕಲೆಯಾಗಿದ್ದವು ಎಂದರೆ ಸಾಕ್ಷಿ ನೆಲ , ಗೊಡೆ , ಕುರ್ಚಿ , ಟೇಬಲ್ ಗಳ ಮೇಲೆ ರಕ್ತದ ಕಲೆಯಾಗಿತ್ತು ಎಂದು ನುಡಿಯುತ್ತಾರೆ.

30) ನನ್ನ ಮಗಳಿಗೆ ಆರೋಪಿಯಿಂದ ಅತೀ ಶೀಘ್ರದಲ್ಲಿ ವಿಚ್ಛೇನೆ ಬೇಕಾದ ಕಾರಣ ವಿಚ್ಛೇದನೆಗೆ ಕೇಸು ದಾಖಲಿಸಿದ್ದಳು ಎಂದರೆ ಸರಿ . ನಾನು ಮತ್ತು ನನ್ನ ಮಗಳು ಕೌಟುಂಬಿಕ ನ್ಯಾಯಾಲಯದ ಮುಂದೆ ಇದ್ದ ಕಟ್ಟೆ ಮೇಲೆ ಕುಳಿತಾಗ ಆರೋಪಿಯನ್ನು ನೋಡಿ ನನ್ನ ಮಗಳು ಚುಡಾಯಿಸಿ ಪ್ರಚೋದನೆ ನೀಡಿದ್ದಳು ಎಂದರೆ ಸರಿಯಲ್ಲ.

31) ಆರೋಪಿ ಮತ್ತು ಚಾಸಾ-2 ರವರಿಗೆಒಂದು ಮಗು ಇದ್ದ ಕಾರಣ ಆರೋಪಿ ಯಾವತ್ತು ಕೂಡಾ ಚಾಸಾ-2 ರವರ ಜೊತೆ ಸಂಸಾರ ಮಾಡಲು ಇಚ್ಚಿಸಿದ್ದನು

ಎಂದರೆ ಸಾಕ್ಷಿ – ಅವರ ಕುಟುಂಬದ ವಿಚಾರ ಅವರಿಗೆ ಗೊತ್ತು ಎಂದು ನುಡಿಯುತ್ತಾರೆ. ಆರೋಪಿ ಅವರಿಗೆ ಒಂದು ಗಂಡು ಮಗು ಹುಟ್ಟಿದ್ದು ಆತನ ಸಲುವಾಗಿಯಾದರೂ ನಾವು ಒಂದಾಗಿ ಇರಬೇಕು ಎಂದು ನನ್ನ ಮಗಳಿಗೆ ಅನೇಕ ಬಾರಿ ಹೇಳಿರುತ್ತಾನೆ ಎಂದರೆ ಸಾಕ್ಷಿ – ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನನ್ನ ಮಗಳ ಬಳಿ ಬಂದು ಜೊತೆಯಾಗಿ ಒಂದಾಗಿರೋಣ ಎಂದು ಎಷ್ಟು ಬಾರಿ ಹೇಳಿದರೂ ಸಹ ನನ್ನ ಮಗಳು ಆರೋಪಿಯಿಂದ ದೂರವಾಗಲು ಸುಳ್ಳು ಕೇಸು ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ.

32) ನನ್ನ ಮಗಳು ಫೋನಿನಲ್ಲಿ ಮಾತನಾಡುತ್ತಿರುವಾಗ ಆರೋಪಿ ನನ್ನ ಮಗಳಿಗೆ ಜೀವನದ ಬಗ್ಗೆ ಹೇಳಿ ತಿದ್ದಿಕೊಳ್ಳಲು ಹೇಳಿದಾಗ ನನ್ನ ಮಗಳು ಆರೋಪಿಯ ಮೇಲೆ ರೇಗಿ ಆತನನ್ನು ದೂರ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳ ವರ್ತನೆಯಿಂದ ಆರೋಪಿ ಮಧ್ಯಕುಡಿಯಲು ಪ್ರಾರಂಭಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯಾವಗ ತನ್ನ ಮಗನನ್ನು ನೋಡುತ್ತಿದ್ದನೋ ಆವಾಗ ನನ್ನ ಮಗಳಿಗೆ ಪ್ರೀತಿಯಿಂದ ಬಂದು ಜೊತೆಗೆ ಇರುವಂತೆ ಅನೇಕ ಬಾರಿ ಹೇಳಿರುತ್ತಾನೆ ಎಂದರೆ ಸಾಕ್ಷಿ – ಹೇಳಿರಬಹುದು ಎಂದು ನುಡಿಯುತ್ತಾರೆ. ಆರೋಪಿ ಅನೇಕ ಬಾರಿ ನನ್ನ ಮಗಳಿಗೆ ಪ್ರೀತಿಯಿಂದ ಬಂದು ಜೊತೆಗೆ ಇರುವಂತೆ ಕೇಳಿಕೊಂಡಿದ್ದರಿಂದ ನನ್ನ ಮಗಳು ದಾವಣಗೆರೆ ಬಿಟ್ಟು ಬೆಂಗಳೂರಿಗೆ ಹೋಗಿರುತ್ತಾಳೆ ಎಂದರೆ ಸಾಕ್ಷಿಯು ಆರೋಪಿಯು ಮನೆಯಲ್ಲಿ ಕಿರುಕುಳ ನೀಡುತ್ತಿದ್ದರಿಂದ ಮತ್ತು ನಮ್ಮ ಮನಯಲ್ಲಿ ಕಿರುಕುಳ ನೀಡುತ್ತಿದ್ದದ್ದರಿಂದ ಆಕೆ ದಾವಣಗೆರೆಯನ್ನು ಬಿಟ್ಟು ಬೆಂಗಳೂರಿಗೆ ಹೋಗಿರುತ್ತಾಳೆ ಎಂದು ನುಡಿಯುತ್ತಾರೆ. ನನ್ನ ಮಗಳು ಆರೋಪಿ ಅವಳ ಹತ್ತಿರ ಬರಬಾರದು ಎಂದು ಹೇಳಿ ಬೆಂಗಳೂರಿನಲ್ಲಿ ಕೂಡಾ ಒಂದು ಕೇಸು ಕೊಟ್ಟಿರುತ್ತಾಳೆ ಎಂದರೆ ಸರಿ.

33) ದಿ.20-09-2025 ರಂದು ಆರೋಪಿ ಬಂದು ಚಾಸಾ-2 ರವರಿಗೆ – ಇಬ್ಬರು ಜೊತೆಗೆ ಇರೋಣ ಬಾ ಎಂದುಕರೆದಿದ್ದನು ಎಂದರೆ ಸಾಕ್ಷಿ ಮೊದಲಿಗೆ ಗೊತ್ತಿಲ್ಲ ಎಂದು ನಂತರ ಇಲ್ಲ ಎಂದು ನುಡಿಯುತ್ತಾರೆ. ಆ ದಿನ ಕೂಡಾ ನನ್ನ ಮಗಳು ಆರೋಪಿಗೆ ನನ್ನ ಹತ್ತಿರ ಬರಬಾರದು ಎಂದು ದೂರ ಕಳುಹಿಸಿರುತ್ತಾಳೆ ಎಂದರೆ ಸಾಕ್ಷಿ

ನನಗೆ ಗೊತ್ತಿಲ್ಲ, ಅವರಿಬ್ಬರ ನಡುವೆ ಏನು ಮಾತಾಯಿತು ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗಳು ಆರೋಪಿಗೆ ಕೀಳಾಗಿ ನೋಡಿದ್ದರಿಂದ ಆರೋಪಿ ಜೀವನವೇ ಬೇಡಿ ಪೆಸ್ಟಿಸೈಡ್ ಕುಡಿದಿದ್ದ ಎಂದರೆ – ಸಾಕ್ಷಿಯು – ಗೊತ್ತಿಲ್ಲ ಎಂದು , ನನ್ನ ಮಗಳಿಗೆ ಚಾಕು ಹಾಕಿರುತ್ತಾನೆ ಎಂದು ಮುಂದುವರೆದು ನುಡಿಯುತ್ತಾರೆ.

34) ನನ್ನ ಮಗಳಿಗೆ ಆರೋಪಿ ಚಾಕು ಹಾಕಿರುವುದಿಲ್ಲ , ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮು.ಮಾ–7 ಚಾಕು ವನ್ನು ಈ ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎಂದು ಹೇಳಲಾದ ದಿನ ಆರೋಪಿ ಚಾಸಾ–2 ರವರ ಮೇಲೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ.

SD/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.